ISSUE 02 JANUARY 2026 VOLUME. 10

# E - STREET VOICE



## “ಇಂದು ಡಾನ್ ಬೊಸ್ಕೊ: ಜೀವಂತ ಆಸ್ತಿ"

ಜಾನ್ ಬೊಸ್ಕೊ ಜೀವಂತವಾಗಿದ್ದಾರೆ ಎಂದು ನಾನು ಹೇಳುತ್ತೇನೆ." ಸಲೇಸಿಯನ್ ಕುಟುಂಬದೊಳಗಿನ ಈ ಸಾಮಾನ್ಯ ಪಲ್ಲವಿಯು ಕೇವಲ ಕಾವ್ಯಾತ್ಮಕ ಅಭಿವ್ಯಕ್ತಿಯಲ್ಲ, ಆದರೆ ಪ್ರಪಂಚದಾದ್ಯಂತ ಸಾವಿರಾರು ಶಾಲೆಗಳು, ತಾಂತ್ರಿಕ ಕೇಂದ್ರಗಳು ಮತ್ತು ಯುವಕೇಂದ್ರಗಳಲ್ಲಿ ಕಂಡುಬರುವ ಆಳವಾದ ಸತ್ಯವಾಗಿದೆ. ಆದರೆ ೨೦೨೬ರಲ್ಲಿ ನಾವು "ಡಾನ್ ಬೊಸ್ಕೊ"ರಾಗಿ ಬಾಳುವುದು ಎಂಬುದರ ಅರ್ಥವೇನು?

ಡಾನ್ ಬೊಸ್ಕೊ ಪ್ರತೀ ಯುವಜೀವದ, ಅದರಲ್ಲೂ ವಿಶೇಷವಾಗಿ ಎಲ್ಲರಿಂದ ತ್ಯಜಿಸಲ್ಪಟ್ಟ ಮತ್ತು ಸಮಾಜದ ಅಂಚಿನಲ್ಲಿರುವ ಯುವಜೀವಗಳ ಸಾಮರ್ಥ್ಯವನ್ನು ಕಂಡ ಪುಣ್ಯಜೀವಿ. ಅವರ ಜೀವನವು "ಪ್ರೇಷಿತ ಧೈರ್ಯ" ಮತ್ತು "ವ್ಯವಹಾರ-ಮನಸನ್ನು” ಹೊಂದಿದ್ದರೂ ಅವು ತಮ್ಮ ಸ್ವಂತ ಲಾಭಕಲ್ಲದೆ ಬಡ ಮಕ್ಕಳ ಉದ್ಧಾರ ಕಾರ್ಯಕ್ಕಾಗಿತ್ತು ಎಂಬುದು ಗಮನಾರ್ಹ.
ದಕ್ಷತೆ ಮತ್ತು ಫಲಿತಾಂಶಗಳಿಂದ ಹೆಚ್ಚಾಗಿ ಅಳೆಯಲ್ಪಡುವ ಇಂದಿನ ವೇಗದ ಯುಗದಲ್ಲಿ  ಸಂತ ಜಾನ್ ಬೊಸ್ಕೊರವರ ಸಮಯಾತೀತ ಬುದ್ಧಿವಂತಿಕೆಯ ತಿರುಳು ಅಡಗಿರುವುದೇ ಶಿಕ್ಷಣ ಹೃದಯಕ್ಕೆ ಸಂಬಂಧಿಸಲ್ಪಟ್ಟ ವಿಷಯ ಎಂಬ ಸತ್ಯದಲ್ಲಿ. ಡಾನ್ ಬೊಸ್ಕೊ, "ಯುವಜೀವಗಳ ನಲ್ಮೆಯ ತಂದೆ ಮತ್ತು ಶಿಕ್ಷಕ"ರಾದ್ದರಿಂದ ಮಕ್ಕಳಲ್ಲಿ ಭಯ ಅಥವಾ ಬೆದರಿಕೆಯ ಮೂಲಕ ಕಲಿಸುವ ಪರಿಪಾಠದಲ್ಲಿ ನಂಬಿಕೆ ಇರಿಸಿರಲಿಲ್ಲ. ಬದಲಾಗಿ, ಸಮಂಜಸತೆ, ಧರ್ಮ ಮತ್ತು ಪ್ರೀತಿ ಈ ಮೂರು ಸ್ಥಂಭಗಳ ಮೇಲೆ ನಿಂತಿರುವ "ಮುನ್ನೆಚ್ಚರಿಕಾ ವಿಧಾನ" ಎಂಬ ಶೈಕ್ಷಣಿಕ ವಿಧಾನವನ್ನು ಆರಂಭಿಸಿದರು. ಡಾನ್ ಬೊಸ್ಕೊರವರಿಗೆ ಶಾಲೆ ಅಥವಾ ಯುವಕೇಂದ್ರವು ಕೇವಲ ಶೈಕ್ಷಣಿಕ ಕಲಿಕೆಯ ಸ್ಥಳವಾಗಿರದೆ ಎಲ್ಲರನ್ನೂ ‘ಸ್ವಾಗತಿಸುವ ಮನೆ’ ಮತ್ತು ಸ್ನೇಹ ರೂಪುಗೊಳ್ಳುವ ಆಟದ ಮೈದಾನವಾಗಿತ್ತು.

ಇಂದಿನ ಆಧುನಿಕ ಶಿಕ್ಷಣದ ಸಂಕೀರ್ಣತೆಯಲ್ಲಿ ಪಯಣಿಸುವಾಗ ಡಾನ್ ಬೊಸ್ಕೊರವರಂತೆ, ನಾವೂ ಯುವಜೀವಗಳಿಗೆ "ಪ್ರಸ್ತುತ"ವಾಗಿರೋಣ, ಅವರ ಕನಸುಗಳನ್ನು ಗಂಭೀರವಾಗಿ ಪರಿಗಣಿಸಿ ಅವರಿಗೆ ಸುರಕ್ಷಿತ, ಪ್ರೀತಿ ಮತ್ತು ಸದ್ಗುಣಶೀಲ ವಾತಾವರಣವನ್ನು ನಿರ್ಮಿಸುವತ್ತ ಗಮನ ಹರಿಸೋಣ. ನಾವು ಹೃದಯಕ್ಕೆ ಶಿಕ್ಷಣ ನೀಡಿದಾಗ, ಮನಸ್ಸು ಮತ್ತು ಆತ್ಮವನ್ನೂ ಸಶಕ್ತಗೊಳಿಸುತ್ತೇವೆ.
ಇಂದು, ಅವರು ಸ್ವತ್ತಾಗಿ ಬಿಟ್ಟುಹೋಗಿರುವ ಶೈಕ್ಷಣಿಕ ವಿಧಾನ ನಮಗೆ ಪೂರ್ವಭಾವಿಯಾಗಿ, ಸೃಜನಾತ್ಮಕವಾಗಿ ಮತ್ತು ಧೈರ್ಯಶಾಲಿಗಳಾಗಿರಲು ಸವಾಲಾಗಿದೆ. ನಂಬಿಕೆ ಮತ್ತು ಕ್ರಿಯೆಯ ಮಸೂರದ ಮೂಲಕ ವಿದ್ಯುನ್ಮಾನ ಜಗತ್ತು ಮತ್ತು ಇಂದಿನ "ಹೊಸ ಬಡತನ" ವನ್ನು ವೀಕ್ಷಿಸಲು ನಮಗೆ ಕರೆ ನೀಡುತ್ತಿದೆ. ನಾವು ಮುಂದುವರಿಯುತ್ತಿರುವಾಗ, ಅವರ "ದಾ ಮಿಹಿ ಅನಿಮಾಸ್, ಚೇತೆರಾ ತೊಲ್ಲೆ" (ನನಗೆ ಆತ್ಮಗಳನ್ನು ನೀಡಿ, ಮತ್ತೆಲ್ಲವನ್ನು ತೆಗೆದುಕೊಳ್ಳಿ) ಧ್ಯೇಯವಾಕ್ಯವನ್ನು ನಮ್ಮದಾಗಿಸಿಕೊಳ್ಳೋಣ. ಹಾಗೆಯೇ ನಮ್ಮ ಶೈಕ್ಷಣಿಕ, ತಾಂತ್ರಿಕ ಅಥವಾ ಸಾಮಾಜಿಕ-ಪ್ರಯತ್ನಗಳು ಯಾವಾಗಲೂ ಯುವಜೀವಗಳ ಸಮಗ್ರ ಬೆಳವಣಿಗೆಯತ್ತ ಸಾಗುವುದೆಂಬುದ್ದನ್ನು ಖಚಿತಪಡಿಸಿಕೊಳ್ಳೋಣ.

Fr. KJ Joseph SDB



# ಬೀದಿ ಸನ್ನಿಧಿ (ರಕ್ಷಣೆ ಮತ್ತು ಪುನರ್ವಸತಿ)

## ಬೊಸ್ಕೊ ನಿವಾಸ್

ಪೋಷಕರ ಸಭೆ - ಮಗುವಿನ ಶೈಕ್ಷಣಿಕ ಪ್ರಗತಿ ಮತ್ತು ಕುಟುಂಬದಲ್ಲಿ ಪೋಷಕರ ಪ್ರಮುಖ ಪಾತ್ರದ ಬಗ್ಗೆ ಅರಿವು ಮೂಡಿಸಲು ಮತ್ತು ಸಾಮಾಜಿಕ ಅರ್ಹತೆಗಳನ್ನು ಪಡೆಯಲು ಕಾಬ್ಲರ್ ಕಾಲೋನಿ ಸಮುದಾಯದಲ್ಲಿ



## ಬೊಸ್ಕೊ ನಿಲಯ

ಆನಂದಪುರಂ ಸಮುದಾಯದ ಸದಸ್ಯರಿಗೆ ಜನವರಿ 7, 2026 ರಂದು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಕುರಿತು ಜಾಗೃತಿ ಕಾರ್ಯಕ್ರಮ



## ಎ.ಆರ್.ಎಸ್.ಪಿ

ಜನವರಿ 8, 2026 ರಂದು ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ರಕ್ಷಣಾ ಕಾರ್ಯವಿಧಾನಗಳ ಕುರಿತು SMVT ರೈಲ್ವೆ ನಿಲ್ದಾಣದಲ್ಲಿ ಸಾರ್ವಜನಿಕ ಜಾಗೃತಿ



## ಬಸ್ ನಿಲ್ದಾಣ

BMTC ಬಸ್ ನಿಲ್ದಾಣದಲ್ಲಿ, ಜನವರಿ 14 ಮತ್ತು 15, 2026 ರಂದು ಮಕ್ಕಳ ಸಮೀಕ್ಷೆ





### ಮಾಗಡಿ ರಸ್ತೆ

ಲೈಫ್ ಸ್ಕಿಲ್ ಸೆಷನ್ - ಕಡಪಾ ಸ್ವಾಮಿ ಮಠ ಅಧ್ಯಯನ ಕೇಂದ್ರದ ಮಕ್ಕಳಿಗಾಗಿ, ಜನವರಿ 9, 2026 ರಂದು ನಿರ್ಧಾರ ತೆಗೆದುಕೊಳ್ಳುವುದು ಮತ್ತು ಪರಸ್ಪರ ಸಂಬಂಧಗಳ ಕುರಿತು



### ಗಾಂಧಿನಗರ ಪ್ರದೇಶ

ಜನವರಿ 3, 31, 2026 ರಂದು ಗಾಂಧಿನಗರದ ಅಣ್ಣಮ್ಮ ಕಾಲೋನಿಯಲ್ಲಿ ತಾಯಂದಿರ ಗುಂಪು ಸಭೆ



# ಘಟಕಗಳು

### ಸಿ.ಎಸ್.ಎನ್

ಪಾಲುದಾರರ ಜಾಗೃತಿ- ಜನವರಿ 22, 2026 ರಂದು ಬೆಂಗಳೂರಿನ ಗಂಗೊಂಡನಹಳ್ಳಿಯಲ್ಲಿ ಗ್ಯಾರೇಜ್ ಮಾಲೀಕರಿಗೆ ಜಾಗೃತಿ





## ಪೋಷಕತ್ವ ಕಾರ್ಯಕ್ರಮ

ಜನವರಿ 13, 2026 ರಂದು ಬೆಂಗಳೂರು ಗ್ರಾಮಾಂತರದ ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಪೋಲೀಸ್ ಅಧಿಕಾರಿಗಳಿಗೆ ಪೋಷಣೆಯ ಪರಿಕಲ್ಪನೆಯ ಕುರಿತು ಜಾಗೃತಿ ಕಾರ್ಯಕ್ರಮ



## ಆರೋಗ್ಯ ರಕ್ಷಣಾ ಕಾರ್ಯಕ್ರಮ

ಸಾಮಾನ್ಯ ಆರೋಗ್ಯ ಶಿಬಿರಗಳು



## ಕುಟುಂಬದ ಪುನರ್‌ಸ್ಥಾಪನೆ ಮತ್ತು ನಂತರದ ಆರೈಕೆ

ತಮ್ಮ ಕುಟುಂಬಗಳಿಗೆ ಮರಳಿದ ಮಕ್ಕಳ ಕುಟುಂಬಗಳಿಗೆ ಮನೆ ಭೇಟಿಗಳು



## ವಲಸಿಗರ ಸಹಾಯ ಕೇಂದ್ರ

ಜನವರಿ 17 ಮತ್ತು 21, 2026 ರಂದು ಥಣಿಸಂದ್ರ ಮತ್ತು ಕೆ ನಾರಾಯಣಪುರದಲ್ಲಿ ವಲಸೆ ಮಕ್ಕಳಿಗಾಗಿ ಮನರಂಜನಾ ಕಾರ್ಯಕ್ರಮಗಳು





## ಸಿ.ಆರ್.ಐ.ಎಸ್.ಪಿ



ಬೆಂಗಳೂರಿನ ಸಂಪಂಗಿ ರಾಮನಗರದಲ್ಲಿರುವ ಸರ್ಕಾರಿ ಪಿಯು ಕಾಲೇಜಿನಲ್ಲಿ ಸಿಆರ್‌ಸಿ ಮತ್ತು ಹದಿಹರೆಯದವರ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು

## ಆರ್‌ಎಂಟಿ



ತಾಜ್ ಹೋಟೆಲ್ ಜನವರಿ 24, 2025 ರಂದು ಬೊಸ್ಕೊ ಮನೆ ತಂಡಕ್ಕೆ ಭೇಟಿ ನೀಡಿತು ಮತ್ತು ಮಕ್ಕಳೊಂದಿಗೆ ಗಣರಾಜ್ಯೋತ್ಸವವನ್ನು ಆಚರಿಸಿತು

## ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ವಕಾಲತ್ತು ಕಾರ್ಯಕ್ರಮ



ಮಕ್ಕಳ ಸಹಾಯ ಕೇಂದ್ರ, ಮಕ್ಕಳ ರಕ್ಷಣಾ ಕಾರ್ಯವಿಧಾನಗಳು ಮತ್ತು ಸಂಘರ್ಷದಲ್ಲಿರುವ ಮಕ್ಕಳ ಪುನರ್ವಸತಿಗೆ ಸಂಬಂಧಿಸಿದ ತಿಳುವಳಿಕೆ ಮತ್ತು ಪ್ರಾಯೋಗಿಕ ಕೌಶಲ್ಯಗಳನ್ನು ಹೆಚ್ಚಿಸುವ ಕುರಿತು ECHO ನಡೆಸಿದ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದಲ್ಲಿ ತಂಡವು ಭಾಗವಹಿಸಿತು

## ಮಾನವ ಸಂಪನ್ಮೂಲ ಅಭಿವೃದ್ಧಿ



ಜನವರಿ 29, 2026 ರಂದು ಬೊಸ್ಕೊ ಯುವೋದಯದಲ್ಲಿ ವಿಶ್ವದೀಪ್ ಇನ್‌ಸ್ಟಿಟ್ಯೂಟ್ ಆಫ್ ಯೂತ್ ಮಿನಿಸ್ಟ್ರೀಸ್‌ನ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಓರಿಯಂಟೇಶನ್ ಕಾರ್ಯಕ್ರಮವನ್ನು ನಡೆಸಲಾಯಿತು



# ಮಕ್ಕಳ ಆರೈಕೆ ಸಂಸ್ಥೆಗಳು

## ಬೊಸ್ಕೊ ಮನೆ

"ನನ್ನ ದೃಷ್ಟಿ, ನನ್ನ ಕ್ಯಾನ್ವಾಸ್" - ಜನವರಿ 4, 2026 ರಂದು ಕೇಂದ್ರದಲ್ಲಿ ಮಕ್ಕಳಿಗಾಗಿ ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಲಾಯಿತು



## ಬೊಸ್ಕೊ ವಿಕಾಸ್

ಜನವರಿ 11, 2026 ರಂದು ಆಯೋಜಿಸಲಾದ ಪ್ರಿನ್ಸ್ ಕಪ್ 2026 -ಟೇಕ್ವಾಂಡೋ ಸ್ಪರ್ಧೆಯಲ್ಲಿ ಮಕ್ಕಳು ಭಾಗವಹಿಸಿದರು




## ಬೊಸ್ಕೊ ರೇನ್ಬೋ ಹೋಮ್

ಜನವರಿ 26, 2026 ರಂದು ಲಾಲ್‌ಬಾಗ್‌ಗೆ ವಿಹಾರ





## ಬೊಸ್ಕೊ ವಾತ್ಸಲ್ಯ ಭವನ



ಜನವರಿ 1, 2026 ರಂದು ತಾಜ್ ವೆಸ್ಟ್ ಎಂಡ್ ಹೋಟೆಲ್ ತಂಡದೊಂದಿಗೆ
ಕೇಂದ್ರದಲ್ಲಿ ಹೊಸ ವರ್ಷದ ಆಚರಣೆ

## ಬೊಸ್ಕೊ ಸುಮನಹಳ್ಳಿ



ಜನವರಿ 14, 2026 ರಂದು ಮೂವತ್ಮೂರು
ಪ್ರಶಿಕ್ಷಣಾರ್ಥಿಗಳಿಗೆ ಪರಿಣಾಮಕಾರಿ ನಾಯಕತ್ವದ ಕುರಿತು
ಜೀವನ ಕೌಶಲ್ಯ ಅಧಿವೇಶನ

## ಬೊಸ್ಕೊ ಯುವಕೇಂದ್ರ



ರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನು ಜನವರಿ 24, 2026 ರಂದು
ಆಚರಿಸಲಾಯಿತು



ಬೊಸ್ಕೊ ಯುವೋದಯ

ಕೇಂದ್ರದಲ್ಲಿ ಮಕ್ಕಳೊಂದಿಗೆ ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ ಆಚರಿಸಲಾಯಿತು



# ಡಾನ್ ಬೊಸ್ಕೊ ಮಾಸ

## ಡಾನ್ ಬೊಸ್ಕೊ ಮಾಸದ ಉದ್ಘಾಟನೆ

ಈ ವರುಷ ಜನವರಿ ೨ ರಿಂದ ೫ ರವರೆಗೆ ಎಲ್ಲಾ ಬೊಸ್ಕೊ ಕೇಂದ್ರಗಳಲ್ಲಿ ಮಕ್ಕಳು ಮತ್ತು ಯುವಜೀವಗಳ ಸಮ್ಮುಖದಲ್ಲಿ ಡಾನ್ ಬೊಸ್ಕೊ ಮಾಸವನ್ನು ಉದ್ಘಾಟಿಸಲಾಯಿತು. ಪ್ರತೀ ಕೇಂದ್ರ ಮತ್ತು ಸೇವಾಕ್ಷೇತ್ರದ ಪ್ರತಿನಿಧಿಗಳು ಅವರ ನಿರ್ದೇಶಕರೊಂದಿಗೆ, ಸಂತ ಜಾನ್ ಬೊಸ್ಕೊರವರಿಗೆ ಗೌರವ ಸಲ್ಲಿಸಿದರು. ಬೊಸ್ಕೊ ಬೆಂಗಳೂರಿನ ಕಾರ್ಯಕಾರಣಿ ನಿರ್ದೇಶಕ ಫಾ. ವರ್ಗೀಸ್ ಪಲ್ಲಿಪುರಂ ಅವರು ಡಾನ್ ಬೊಸ್ಕೊರವರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಮತ್ತು ನೂತನ ವರ್ಷದಲ್ಲಿ ಡಾನ್ ಬೊಸ್ಕೊರವರ ಕನಿಷ್ಠ ಒಂದಾದರೂ ಸದ್ಗುಣವನ್ನು ಮೈಗೂಡಿಸಿಕೊಳ್ಳಲು ಎಲ್ಲರಿಗೂ ಕರೆಕೊಟ್ಟರು. ವಿವಿಧ ಕೇಂದ್ರಗಳ ನಿರ್ದೇಶಕರು ಡಾನ್ ಬೊಸ್ಕೊರವರ ತ್ಯಾಗ ಮತ್ತು









ಯುವಜೀವಗಳ ಮೇಲಿನ ಸಮರ್ಪಣೆಯನ್ನು ಆದರ್ಶವನ್ನಾಗಿ ನೀಡಿದರು. ಅವರು ಡಾನ್ ಬೊಸ್ಕೊರವರ ಮಾಸವನ್ನು ಆಚರಿಸುವ ಪ್ರಾಮುಖ್ಯತೆ, ಮತ್ತು ಡಾನ್ ಬೊಸ್ಕೊರವರ ಕೆಲಸ, ಅವರ ಧ್ಯೇಯ ಮತ್ತು ಅವರ ದೂರದೃಷ್ಟಿಯ ಬಗ್ಗೆ ಮಾಹಿತಿ ನೀಡಿದರು. ಡಾನ್ ಬೊಸ್ಕೊರವರನ್ನು ಅನುಕರಿಸಲು ಮತ್ತು ಅವರನ್ನು ಮಾದರಿ ಎಂದು ಪರಿಗಣಿಸಲು ಯುವಜನರನ್ನು ಪ್ರೋತ್ಸಾಹಿಸಿದರು. ಮಕ್ಕಳು ಸಂತ ಜಾನ್ ಬೊಸ್ಕೊರವರನ್ನು ಗೌರವಿಸಿ ಗೀತೆಗಳನ್ನು ಹಾಡಿದರು. ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಎಲ್ಲಾ ಕೇಂದ್ರ ಮತ್ತು ಸೇವಾಕ್ಷೇತ್ರದ ಮಕ್ಕಳು ಮತ್ತು ಯುವಜನರು ಭಾಗವಹಿಸಿದ್ದರು.

## ಬೊಸ್ಕೊ ವಾರ್ಷಿಕ ರಸಪ್ರಶ್ನೆ ಸ್ಪರ್ಧೆ ೨೦೨೬

ಬೊಸ್ಕೊ ಸಂಸ್ಥೆಯ ಮಕ್ಕಳಿಗಾಗಿ ಡಾನ್ ಬೊಸ್ಕೊ ವಾರ್ಷಿಕ ರಸಪ್ರಶ್ನೆ ಸ್ಪರ್ಧೆಯನ್ನು ಜನವರಿ ೧೦, ೨೦೨೬ ರಂದು ಬೊಸ್ಕೊ ಮನೆಯಲ್ಲಿ ನಡೆಸಲಾಯಿತು. ಬೊಸ್ಕೊ ಸಂಸ್ಥೆಯ ಕಾರ್ಯಕಾರಿಣಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ ಮತ್ತು ಆಡಳಿತಾಧಿಕಾರಿ ಫಾ. ಜಾನ್ ಪೀಟರ್ ಕಾರ್ಯಕ್ರಮವನ್ನು ಉದ್ಘಾಟಿಸಿದರು.



ವಿವಿಧ ಕೇಂದ್ರ ಮತ್ತು ಸೇವಾಕ್ಷೇತ್ರಗಳನ್ನು ಪ್ರತಿನಿಧಿಸುವ ಎಂಟು ತಂಡಗಳು - ಬೊಸ್ಕೊ ಮನೆ ಮತ್ತು ವಿಕಾಸ್, ವಾತ್ಸಲ್ಯ ಭವನ, ಯುವೋದಯ, ನಿಲಯ, ಯುವ ಸ್ಪಂದನ, ನಿವಾಸ್, ರೈನ್‌ಬೋ ಹೋಮ್, ಯುವಕೇಂದ್ರ ಮತ್ತು ಸುಮನಹಳ್ಳಿಯ ಮಕ್ಕಳೆಲ್ಲರೂ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.







ಕ್ವಿಜ್ ಮಾಸ್ಟರ್ ವಾತ್ಸಲ್ಯ ಭವನದ ಶ್ರೀಲಕ್ಷ್ಮಿ, ನಡೆಸಿಕೊಟ್ಟ ಸ್ಪರ್ಧೆಯಲ್ಲಿ ನೋ-ಪಾಸಿಂಗ್ ರೌಂಡ್, ಪಾಸಿಂಗ್ ರೌಂಡ್, ರ್‍ಯಾಪಿಡ್ ಫೈರ್ ರೌಂಡ್, ಇಮೇಜ್ ರೌಂಡ್ ಮತ್ತು ವರ್ಡ್ಸ್ ರೌಂಡ್ ಅನ್ನು ಒಳಗೊಂಡಿತ್ತು. ಬೊಸ್ಕೊ ವಾತ್ಸಲ್ಯ ಭವನದ ಮಕ್ಕಳು ವಿಜೇತರಾಗಿ ಹೊರಹೊಮ್ಮಿದರು ಮತ್ತು ಬೊಸ್ಕೊ ಮನೆ ಮತ್ತು ವಿಕಾಸ್ ಮಕ್ಕಳು ರನ್ನರ್ ಅಪ್ ಆದರು. ಬೊಸ್ಕೊ ನಿವಾಸ್ ಮಕ್ಕಳು ತೃತೀಯ ಸ್ಥಾನ ಪಡೆದರು. ರಸಪ್ರಶ್ನೆ ಸ್ಪರ್ಧೆಯಲ್ಲಿ ೨೪ ಮಕ್ಕಳು ಮತ್ತು ಎಂಟು ಜನ ಸಿಬ್ಬಂದಿಗಳು ಭಾಗವಹಿಸಿದ್ದರು.

## ಮಕ್ಕಳ ಕ್ರೀಡಾ ದಿನ

ಬೊಸ್ಕೊ ಬೆಂಗಳೂರು: ಜನವರಿ ೧೮ರಂದು ಚಾಮರಾಜಪೇಟೆಯ ಸೇಂಟ್ ಜೋಸೆಫ್ ಪ್ರೌಢಶಾಲೆಯಲ್ಲಿ ಮಕ್ಕಳ ಕ್ರೀಡಾ ದಿನವನ್ನು ಆಯೋಜಿಸಲಾಗಿತ್ತು. ಪ್ರಾಸ್ತಾವಿಕ ಭಾಷಣದಲ್ಲಿ ಬೊಸ್ಕೊ ಬೆಂಗಳೂರಿನ ಕಾರ್ಯಕಾರಿಣಿ ನಿರ್ದೇಶಕ ಫಾ. ವರ್ಗೀಸ್ ಪಲ್ಲಿಪುರಂ ಮಾತನಾಡಿ, "ಯಶಸ್ಸು ಅಥವಾ ವೈಫಲ್ಯ ಸಿಕ್ಕರೂ ನಗುತ್ತಲೇ ಇರಿ ಮತ್ತು ನಿಗದಿಪಡಿಸಿದ ಗುರಿಗಳನ್ನು ತಲುಪುವತ್ತ ಮುನ್ನಡೆಯಿರಿ", ಎಂದು ಮಕ್ಕಳನ್ನು ಪ್ರೋತ್ಸಾಹಿಸಿದರು.





ಬೊಸ್ಕೊ ಸಂಸ್ಥೆಗೆ ಸಂಬಂಧಿಸಿದ ಕೇಂದ್ರಗಳು ಮತ್ತು ಪ್ರದೇಶಗಳನ್ನು ಪ್ರತಿನಿಧಿಸುವ ನಾಯಕರು ಒಲಿಂಪಿಕ್ ಜ್ಯೋತಿಯನ್ನು ಬೆಳಗಿಸಿದರು ಮತ್ತು ಹೊತ್ತೊಯ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರಿನ ಜಯನಗರದ ಜಿ.ಎಫ್.ಸಿ ದೈಹಿಕ ಶಿಕ್ಷಣ ನಿರ್ದೇಶಕ ಶ್ರೀ ಕೆ.ಎಂ. ಬಸವಯ್ಯರವರು ಮಕ್ಕಳು ಕ್ರೀಡಾ ಮನೋಭಾವನೆಯನ್ನು ಬೆಳೆಸಿಕೊಂಡು ಎತ್ತರಕ್ಕೆ ಬೆಳೆಯಲಿ ಎಂದು ಮಕ್ಕಳಿಗೆ ಶುಭಕೋರಿದರು ಹಾಗೂ ಬಾಲ್ಯದಲ್ಲಿ ಪೋಲಿಯೊದಿಂದ ಹೊರಬಂದು ವಿಶ್ವ-ದಾಖಲೆಯ ಒಲಿಂಪಿಕ್ ಚಾಂಪಿಯನ್ ಮತ್ತು ಅಂತರಾಷ್ಟ್ರೀಯ ಕ್ರೀಡೆಯಾಗಿ ಹೊರಹೊಮ್ಮಿದ ಅಮೇರಿಕನ್ ಓಟಗಾರ್ತಿ ವಿಲ್ಮಾ ರುಡಾಲ್ಫ್ ಅವರ ಉದಾಹರಣೆಯನ್ನು ಉಲ್ಲೇಖಿಸಿದರು. ಅಂತರಾಷ್ಟ್ರೀಯ ಅಥ್ಲೆಟಿಕ್ಸ ತರಬೇತುದಾರರಾದ ಶ್ರೀ ಕೃಷ್ಣಮೂರ್ತಿ ಎಸ್. ಕ್ರೀಡಾಪಟುಗಳನ್ನು ಉದ್ದೇಶಿಸಿ, "ಈ ಮಕ್ಕಳು ಮುಂದಿನ ಹದಿನೈದರಿಂದ ಇಪ್ಪತ್ತು ವರ್ಷಗಳಲ್ಲಿ ಕ್ರೀಡಾಪಟುಗಳನ್ನು








ಉದ್ದೇಶಿಸಿ, "ಈ ಮಕ್ಕಳು ಮುಂದಿನ ಹದಿನೈದರಿಂದ ಇಪ್ಪತ್ತು ವರ್ಷಗಳಲ್ಲಿ ಯಶಸ್ವಿ ಕ್ರೀಡಾಪಟುಗಳಾಗಿ ಹೊರಹೊಮ್ಮುತ್ತಾರೆ", ಎಂದು ಹೇಳಿದರು. ಮಕ್ಕಳ ಪ್ರತಿನಿಧಿ ಮಾಸ್ಟರ್ ವಿಶಾಲ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಕ್ಕಳು ಮತ್ತು ಸಿಬ್ಬಂದಿಗಳು ಪ್ರಮಾಣ ವಚನ ಸ್ವೀಕರಿಸಿದರು.
ಸಬ್ ಜೂನಿಯರ್, ಜೂನಿಯರ್ ಮತ್ತು ಸೀನಿಯರ್ಸ ವಿವಿಧ ಕ್ರೀಡಾಕೂಟಗಳಾದ ರನ್ನಿಂಗ್ ರೇಸ್ (೫೦ ಮೀ, ೧೦೦ ಮೀ, ೨೦೦ ಮೀ, ೪೦೦ ಮೀ ಮತ್ತು ರಿಲೇ), ಎತ್ತರ ಜಿಗಿತ, ಲಾಂಗ್ ಜಂಪ್, ಹಗ್ಗಜಗ್ಗಾಟ, ಗುಂಡು ಎಸೆತ, ಗೋಣಿಚೀಲ ಓಟ, ಕಪ್ಪೆ ಓಟ, ಮ್ಯೂಸಿಕಲ್ ಚೇರ್, ನಿಂಬೆ ಮತ್ತು ಚಮಚ ಓಟ, ನಗರದಲ್ಲಿ ಬಾಂಬ್, ಹೀಗೆ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿತ್ತು. ನಿರ್ದೇಶಕರು ಮತ್ತು ಸಿಬ್ಬಂದಿಗಳು ವಿಜೇತರಿಗೆ ಪದಕ ಹಾಗೂ ಪ್ರಮಾಣ ಪತ್ರ ವಿತರಿಸಿದರು. ಫಾ. ಜಾನ್ ಪೀಟರ್, ಫಾ. ಜೋಸೆಫ್ ದಂಡಾವತಿ, ಫಾ. ದೇವರಾಜ್, ಫಾ. ದೀಪು, ಫಾ. ಆನಂದ್ ಮತ್ತು ಬೊಸ್ಕೊ ವಾತ್ಸಲ್ಯ ಭವನದ ನಿರ್ದೇಶಕರಾದ ಶ್ರೀಮತಿ ಶೀಬಾ ಥಾಮಸ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಬೊಸ್ಕೊ ಕೇಂದ್ರಗಳು ಮತ್ತು ಸೇವಾಕ್ಷೇತ್ರಗಳ ಸುಮಾರು ನಾಲ್ಕುನೂರು ಮಕ್ಕಳು ಕ್ರೀಡಾಕೂಟದಲ್ಲಿ ಭಾಗವಹಿಸಿದರು.

## ಬೆಂಗಳೂರಿನ ಬೊಸ್ಕೊ ನಲ್ಲಿ ಮಕ್ಕಳ ಸಾಂಸ್ಕೃತಿಕ ಉತ್ಸವ

ಜನವರಿ ೨೫ರಂದು ಬೆಂಗಳೂರಿನ ಬೊಸ್ಕೊ ಮನೆಯಲ್ಲಿ ಮಕ್ಕಳ ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸಲಾಗಿತ್ತು. ಡಾನ್ ಬೊಸ್ಕೊರವರ ಪಾರಂಪರ್ಯವನ್ನು ಗೌರವಿಸಲು, ಅವರ ಜೀವನ ಮತ್ತು ಸೇವಾಕಾರ್ಯ ಅಪಾಯದಲ್ಲಿರುವ ಯುವಜನರನ್ನು ಪ್ರೇರೇಪಿಸುತ್ತದೆ ಮತ್ತು ಮೇಲಕ್ಕೆತ್ತುತ್ತಿದೆ. ಈ ಹಬ್ಬದ ಮೂಲಕ, ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು, ಅವರ ಸಂಸ್ಕೃತಿಯನ್ನು ಆಚರಿಸಲು ಮತ್ತು ಪೂರಕ ವಾತಾವರಣದಲ್ಲಿ ತಮ್ಮ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ವೇದಿಕೆಯನ್ನು ರೂಪಿಸಲಾಗಿತ್ತು. ಗಣ್ಯರು ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು



ಜನವರಿ ೨೫ರಂದು ಬೆಂಗಳೂರಿನ ಬೊಸ್ಕೊ ಮನೆಯಲ್ಲಿ ಮಕ್ಕಳ ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸಲಾಗಿತ್ತು. ಡಾನ್ ಬೊಸ್ಕೊರವರ ಪಾರಂಪರ್ಯವನ್ನು ಗೌರವಿಸಲು, ಅವರ ಜೀವನ ಮತ್ತು ಸೇವಾಕಾರ್ಯ ಅಪಾಯದಲ್ಲಿರುವ ಯುವಜನರನ್ನು ಪ್ರೇರೇಪಿಸುತ್ತದೆ ಮತ್ತು ಮೇಲಕ್ಕೆತ್ತುತ್ತಿದೆ. ಈ ಹಬ್ಬದ ಮೂಲಕ, ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು, ಅವರ ಸಂಸ್ಕೃತಿಯನ್ನು ಆಚರಿಸಲು ಮತ್ತು ಪೂರಕ ವಾತಾವರಣದಲ್ಲಿ ತಮ್ಮ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ವೇದಿಕೆಯನ್ನು ರೂಪಿಸಲಾಗಿತ್ತು. ಗಣ್ಯರು ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು.








ಜಮಾತೆ ಇಸ್ಲಾಮಿ ಹಿಂದ್, ಕರ್ನಾಟಕ ರಾಜ್ಯ ಕಾರ್ಯದರ್ಶಿ ಶ್ರೀ ಅಕ್ಬರ್ ಅಲಿ ಉಡುಪಿ ಮಾತನಾಡಿ, ಮಕ್ಕಳೊಂದಿಗೆ ಸಮಯ ಕಳೆಯುವುದು ಸ್ವರ್ಗದ ತೋಟದಲ್ಲಿದ್ದಂತೆ, ನಾಲಿಗೆಯು ವ್ಯಕ್ತಿಯ ವ್ಯಕ್ತಿತ್ವದ ಮುಖವಾಗಿದೆ, ಅದನ್ನು ಪ್ರೀತಿ, ಸಹಾನುಭೂತಿ, ತ್ಯಾಗ, ತೋರಿಸಲು ಬಳಸಿ, ಇಂದು ಬೊಸ್ಕೊ ಸಂಸ್ಥೆ ನಿಮ್ಮನ್ನು ಗುರುತಿಸಿದೆ, ನಾಳೆ ಇಡೀ ಜಗತ್ತೇ ನಿಮ್ಮನ್ನು ಗುರುತಿಸಲಿ ಎಂದು ನಲ್ಮೆಯಿಂದ ಕಿವಿಮಾತುಗಳನ್ನು ಹೇಳಿದರು.



ಆಧ್ಯಾತ್ಮಿಕ ಮುಂದಾಳು ಶ್ರೀ ಬೇಲಿಮಠ ಮಹಾ ಸಂಸ್ಥಾನ ಸಾಮಾಜಿಕ-ಸಾಂಸ್ಕೃತಿಕ ಮತ್ತು ಶಿಕ್ಷಣ ಟ್ರಸ್ಟ್ ಸಂಸ್ಥಾಪಕ ಪೂಜ್ಯಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಸ್ವಾಮೀಜಿ ಮಕ್ಕಳ ತೇಜಸ್ವಿ, ನಗು ಕಂಡು ತಮ್ಮ ಸಂತಸ ವ್ಯಕ್ತಪಡಿಸಿದರು. ಬಸವಣ್ಣನವರ ವಚನಗಳನ್ನು ಉಲ್ಲೇಖಿಸಿದ ಅವರು, ದಯೆಯನ್ನು ಬೆಳೆಸಲು, ಹಿರಿಯರನ್ನು ಗೌರವಿಸಲು ಮತ್ತು ಸಮರ್ಪಣಾ ಮನೋಭಾವದಿಂದ ಶಿಕ್ಷಣವನ್ನು ಮುಂದುವರಿಸಲು ಡಾನ್ ಬೊಸ್ಕೊರವರ ಸಂಕಲ್ಪವನ್ನು ಅನುಸರಿಸಲು ಸಲಹೆ ನೀಡಿದರಲ್ಲದೆ ಈ ಮೌಲ್ಯಗಳು ಮಕ್ಕಳಿಗೆ ಯಶಸ್ಸು ಮತ್ತು ಸಂತೋಷವನ್ನು ನೀಡುತ್ತದೆ ಎಂದು ತಿಳಿಸಿದರು.

ಬೊಸ್ಕೊ ಬೆಂಗಳೂರಿನ ಕಾರ್ಯಕಾರಿಣಿ ನಿರ್ದೇಶಕ ಫಾ. ವರ್ಗೀಸ್ ಪಲ್ಲಿಪುರಂ ಅಧ್ಯಕ್ಷೀಯ ಭಾಷಣ ಮಾಡಿದರು.
ಸಪ್ನಾ ಮೆಲಡೀಸ್ ತಂಡದವರಿ೦ದ ಉತ್ತಮವಾದ ವಾದ್ಯಮೇಳಕ್ಕೆ ಮಕ್ಕಳು ಸಾಕ್ಷಿಯಾದರು. ಮಕ್ಕಳು ವರ್ಣರಂಜಿತ ವೇಷಭೂಷಣಗಳನ್ನು ಧರಿಸಿ ಮನಮೋಹಕ ಪ್ರದರ್ಶನಗಳನ್ನು ನೀಡಿದರು. ಡಾನ್ ಬೊಸ್ಕೊ ಹಬ್ಬದ ತಯಾರಿಯಲ್ಲಿ, ಮಕ್ಕಳಿಗಾಗಿ ಒಂದು ತಿಂಗಳ ಕಾಲ ಸಂಭ್ರಮಾಚರಣೆಯನ್ನು ಆಯೋಜಿಸಲಾಗಿತ್ತು, ಇದರಲ್ಲಿ ರಸಪ್ರಶ್ನೆ ಸ್ಪರ್ಧೆ, ಕ್ರೀಡಾ ದಿನಾಚರಣೆ ಮತ್ತು ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳೂ ಸೇರಿವೆ. ಸಮಾರೋಪ ಸಮಾರಂಭದಲ್ಲಿ ವಿಜೇತರನ್ನು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಸಂದರ್ಭವನ್ನು ಗುರುತಿಸಲು ಸುಮಾರು ೬೦೦ ಮಕ್ಕಳು, ಬೊಸ್ಕೊ ಸಂಸ್ಥೆಯ ಸ್ನೇಹಿತರು ಮತ್ತು ಹಿತೈಷಿಗಳೊಂದಿಗೆ ಬೆಂಗಳೂರಿನ ಬೊಸ್ಕೊ ಮನೆಯಲ್ಲಿ ಜಮಾಯಿಸಿದರು.



## ಅಬ್ಸರ್ವೇಶನ್ ಹೋಮ್‌ಗಳಲ್ಲಿರುವ ಮಕ್ಕಳಿಗಾಗಿ ಪ್ರೇರಣೆ ಮತ್ತು ಜೀವನ ಕೌಶಲ್ಯ ಕಾರ್ಯಕ್ರಮ

ಬೊಸ್ಕೊ ಜುವೆನೈಲ್ ಅಡ್ವೊಕಸಿ ಪ್ರಾಜೆಕ್ಟ್ ತಂಡವು ಜನವರಿ ೩ ರಂದು ಅಬ್ಸರ್ವೇಶನ್ ಹೋಮ್‌ಗಳಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ತಮ್ಮನ್ನೇ ಸಂವಾದಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು, ಅವರ ಆತ್ಮವಿಶ್ವಾಸವನ್ನು ಬೆಳೆಸಲು, ಸಕಾರಾತ್ಮಕ ಪರಸ್ಪರ ಸಮಾನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು, ಭವಿಷ್ಯದ ಅಪರಾಧಗಳನ್ನು ತಪ್ಪಿಸಲು, ಅವರನ್ನು ಪ್ರೋತ್ಸಾಹಿಸಲು ಪ್ರೇರಣಾತ್ಮಕ ಮತ್ತು ಜೀವನ ಕೌಶಲ್ಯ ಕಾರ್ಯಕ್ರಮವನ್ನು ಆಯೋಜಿಸಿತ್ತು.



ಸ್ವಯಂ ಪರಿಚಯ, ಆಟ, ಹಾಡುಗಾರಿಕೆ, ಸೃಜನಶೀಲ ಚಟುವಟಿಕೆ ಮತ್ತು ಕಥೆ ಹೇಳುವುದು ಸೇರಿದಂತೆ ಹಲವು ಗುಂಪು ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಲಾಗಿತ್ತು. ಮಕ್ಕಳು ಎಲ್ಲಾ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಿದರು. ಕಾರ್ಯಕ್ರಮದಲ್ಲಿ ವೀಕ್ಷಣಾಲಯದ ಅಧೀಕ್ಷಕಿ ಕವಿತಾ ಉಪಸ್ಥಿತರಿದ್ದರು. ಅವರು ಅಧ್ಯಯನವನ್ನು ಮುಂದುವರೆಸಲು ಮತ್ತು ನಕಾರಾತ್ಮಕ ಸಮಾನ ಸ್ಕಂದ ಪ್ರಭಾವವನ್ನು ತಪ್ಪಿಸಲು ಆಸಕ್ತಿಯನ್ನು ವ್ಯಕ್ತಪಡಿಸಿದರು. ಅಧಿವೇಶನದಲ್ಲಿ ಇಪ್ಪತ್ಮೂರು ಮಕ್ಕಳು ಭಾಗವಹಿಸಿದ್ದರು.

## ರಾಷ್ಟ್ರೀಯ ಯುವ ದಿನಾಚರಣೆ

ಜನವರಿ ೧೨ ರಂದು ಬೊಸ್ಕೊ ನಿವಾಸ್ ಮತ್ತು ಯುವಕೇಂದ್ರ ಅವರು ತಮ್ಮ ತಮ್ಮ ಕೇಂದ್ರಗಳಲ್ಲಿ ಮತ್ತು ಬಿಬಿಎಂಪಿ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನದ ಗೌರವಾರ್ಥವಾಗಿ ರಾಷ್ಟ್ರೀಯ ಯುವ ದಿನಾಚರಣೆಯನ್ನು ಹಮ್ಮಿಕೊಂಡಿದ್ದರು. ಬೊಸ್ಕೊ ನಿವಾಸ್ ಮತ್ತು ಬೊಸ್ಕೊ ಯುವಕೇಂದ್ರದ ಸಂಯೋಜಕರು ಈ ಸಂದರ್ಭದ ಮಹತ್ವವನ್ನು ಮಕ್ಕಳಿಗೆ ತಿಳಿಸಿದರು.







ಇಂದಿನ ಯುವಜನರ ಮೇಲೆ ಜಗತ್ತಿನ ಪ್ರಭಾವ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಯುವಜನರ ಪಾಲ್ಗೊಳ್ಳುವಿಕೆಯ ಪ್ರಾಮುಖ್ಯತೆಯನ್ನು ಸಿಬ್ಬಂದಿ ಸದಸ್ಯರು ಒತ್ತಿ ಹೇಳಿದರಲ್ಲದೆ ಅದರ ಜೊತೆಗೆ ಯುವಜನರು ಪಾಲಿಸಬೇಕಾದ ಕೆಲವು ಅತ್ಯಮೂಲ್ಯ ಮೌಲ್ಯಗಳನ್ನು ತಿಳಿಸಿದರು. ಯುವಜನರ ಕಠಿಣ ಪರಿಶ್ರಮ, ಶಿಕ್ಷಣ, ಸಮರ್ಪಣೆ ಮತ್ತು ಆಧ್ಯಾತ್ಮಿಕ ಶಕ್ತಿಯಿಂದ ಭಾರತದ ಭವಿಷ್ಯವನ್ನು ರೂಪಿಸಬಹುದು ಎಂಬ ಸ್ವಾಮಿ ವಿವೇಕಾನಂದರ ನಂಬಿಕೆಯನ್ನು ಅವರು ಪುನರುಚ್ಚರಿಸಿದರು. ಯುವ ಸಬಲೀಕರಣಕ್ಕಾಗಿ ಅವರ ದೃಷ್ಟಿ, ಇಂದಿಗೂ ಹೆಚ್ಚು ಪ್ರಸ್ತುತವಾಗಿದೆ ಎಂದು ಭಾಗವಹಿಸಿದವರೆಲ್ಲರಿಗೂ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಎಲ್ಲಾ ಬಿಬಿಎಂಪಿ ಕಾಲೇಜು ವಿದ್ಯಾರ್ಥಿಗಳು ಮತ್ತು ಯುವಕೇಂದ್ರದ ಸುಮಾರು ಇಪ್ಪತ್ತೈದು ಬಾಲಕರು ಭಾಗವಹಿಸಿದ್ದರು. ಇದೊಂದು ಸ್ಮರಣೀಯ ಆಚರಣೆಯಾಗಿತ್ತು.

## ಬೊಸ್ಕೊ ಬೆಂಗಳೂರಿನಲ್ಲಿ ಮಕರ ಸಂಕ್ರಾಂತಿ ಆಚರಣೆ

ಬೊಸ್ಕೊ ನಿವಾಸ್, ವಿಕಾಸ್, ಮನೆ, ವಾತ್ಸಲ್ಯ ಭವನ, ರೇನ್‌ಬೋ ಹೋಮ್, ಯುವಕೇಂದ್ರ ಮತ್ತು ಸುಮನಹಳ್ಳಿಯವರು ತಮ್ಮ ತಮ್ಮ ಕೇಂದ್ರಗಳಲ್ಲಿ ಜನವರಿ ೧೫ ರಂದು ಮಕರ ಸಂಕ್ರಾಂತಿ ಹಬ್ಬವನ್ನು ವಿಜೃಂಬಣೆಯಿಂದ ಆಚರಿಸಿದರು.





ಸರ್ವೇಶ್ವರನ ಆಶೀರ್ವಾದವನ್ನು ಕೋರುತ್ತಾ ಪ್ರಾರ್ಥನಾ ಗೀತೆಯೊಂದಿಗೆ ಹಬ್ಬದಾಚರಣೆಗಳು ಪ್ರಾರಂಭವಾದವು. ಪ್ರತಿ ಕೇಂದ್ರದ ನಿರ್ದೇಶಕರು ಹಬ್ಬದ ಮಹತ್ವದ ಬಗ್ಗೆ ಮಾತನಾಡಿ, ಸಂಕ್ರಾಂತಿ ಅಥವಾ ಪೊಂಗಲ್ ಸುಗ್ಗಿಯ ಕಾಲವನ್ನು ಸೂಚಿಸುತ್ತದೆ ಮತ್ತು ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಪರಿವರ್ತನೆಯಾಗುತ್ತಾನೆ ಎಂದು ಹೇಳಿದರು.





ಈ ಸುಗ್ಗಿಯ ಹಬ್ಬವನ್ನು ಭಾರತದ ವಿವಿಧ ಪ್ರದೇಶಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲಾಗಿದ್ದರೂ, ಸರ್ವಶಕ್ತನಿಗೆ ಆತನ ಔದಾರ್ಯಕ್ಕಾಗಿ ಧನ್ಯವಾದ ಸಲ್ಲಿಸುವ ಸಮಯವನ್ನು ಸಾರ್ವತ್ರಿಕವಾಗಿ ಪ್ರತಿನಿಧಿಸುತ್ತದೆ ಎಂದು ಅವರು ವಿವರಿಸಿದರು. ಬೊಸ್ಕೊ ಕೇಂದ್ರಗಳಲ್ಲಿ ಸಂಭ್ರಮಾಚರಣೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ ಎಲ್ಲಾ ಮಕ್ಕಳು ಮತ್ತು ಯುವಜನರಿಗೆ ಸಿಹಿತಿಂಡಿ ಮತ್ತು ಕಬ್ಬು ವಿತರಿಸಲಾಯಿತು.



## ಓರಿಯಂಟೇಶನ್ ಪ್ರೋಗ್ರಾಂ

ವಿಶ್ವದೀಪ್ ಇನ್ಸ್ಟಿಟ್ಯೂಟ್ ಆಫ್ ಯೂತ್ ಮಿನಿಸ್ಟ್ರೀಸ್ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಜನವರಿ ೨೯ರಂದು ಬೊಸ್ಕೊ ಯುವೋದಯದಲ್ಲಿ ಓರಿಯಂಟೇಶನ್ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕಾರಿಣಿ ನಿರ್ದೇಶಕ ಫಾ. ವರ್ಗೀಸ್ ಪಲ್ಲಿಪುರಂ ಅವರು ಬೊಸ್ಕೊ ಸಂಸ್ಥೆ ಮತ್ತು ಅದರ ಚಟುವಟಿಕೆಗಳ ಕುರಿತು ಮಾತನಾಡಿದರು. ಅವರು ಬೊಸ್ಕೊ ಬೆಂಗಳೂರಿನ ಇತಿಹಾಸ, ಅದರ ದೃಷ್ಟಿ ಮತ್ತು ಮಿಷನ್, ಕಾರ್ಯಕ್ರಮಗಳು ಮತ್ತು ಯೋಜನೆಗಳ ಬಗ್ಗೆ ಪಿಪಿಟಿ ಮೂಲಕ ವಿವರಿಸಿದರು.



ಫೋಸ್ಟರ್ ಕೇರ್ ಮತ್ತು ಹೆಣ್ಣು ಮಕ್ಕಳಿಗೆ ಸಂಬಂಧಿತ ವೀಡಿಯೊಗಳನ್ನು ತೋರಿಸಲಾಯಿತು. ವಿದ್ಯಾರ್ಥಿಗಳು ಬೊಸ್ಕೊ ಸಂಸ್ಥೆಯ ಚಟುವಟಿಕೆಗಳು ಮತ್ತು ಮಕ್ಕಳಿಗೆ ನೀಡುತ್ತಿರುವ ಪುನರ್ವಸತಿ ಪ್ರಕ್ರಿಯೆ, ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅರ್ಥಮಾಡಿಕೊಂಡರು. ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳು, ಸಿಬ್ಬಂದಿಗಳು ಮತ್ತು ಮಕ್ಕಳೊಂದಿಗೆ ಸಂವಾದ ಕೂಟವನ್ನು ನಡೆಸಲಾಯಿತು. ಈ ಅಧಿವೇಶನಗಳಿಂದ ಭಾಗವಹಿಸಿದ್ದ ಎಲ್ಲರಿಗೂ ಸಂಸ್ಥೆಯ ಗುರಿ ಮತ್ತು ಉದ್ದೇಶಗಳ ಬಗ್ಗೆ ಹೆಚ್ಚಿನ ಸ್ಪಷ್ಟತೆ ಲಭಿಸಿತು. ವಿದ್ಯಾರ್ಥಿಗಳು ಬೊಸ್ಕೊ ವಾತ್ಸಲ್ಯ ಭವನ ಮತ್ತು ಬೊಸ್ಕೊ ಸುಮ್ಮನಹಳ್ಳಿಗೆ ಭೇಟಿ ನೀಡಿದರು. ಹನ್ನೆರಡು ವಿದ್ಯಾರ್ಥಿಗಳು ಮತ್ತು ಒಬ್ಬ ಫಾದರ್ ಓರಿಯಂಟೇಶನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ರಾಜ್ಯೋತ್ಸವ ಆಚರಣೆ

ಹೆಮ್ಮೆಯಿಂದ ತುಂಬಿರುವ ಪುಟ್ಟ ಹೃದಯಗಳೊಂದಿಗೆ ನಮ್ಮ ರಾಷ್ಟ್ರದ ಚೈತನ್ಯವನ್ನು ಆಚರಿಸಿದೆವು.
ಜನವರಿ ೨೬ರಂದು ಬೊಸ್ಕೊ ಸಂಸ್ಥೆಯ ಎಲ್ಲಾ ಮಕ್ಕಳು ಗಣರಾಜ್ಯೋತ್ಸವ ದಿನವನ್ನು ಅದ್ದೂರಿಯಾಗಿ ಆಚರಿಸಿದರು. ಸ್ವಾತಂತ್ರ್ಯ, ಸಮಾನತೆ ಮತ್ತು ಭರವಸೆಯ ಮೌಲ್ಯಗಳನ್ನು ಗೌರವಿಸಿದಾಗ ಸಂತೋಷ, ಏಕತೆ ಮತ್ತು ನಲಿವು ಸಹಜವಾಗಿಯೇ ಮೂಡುತ್ತದೆ ಎಂಬ ಅಂಶವನ್ನು ಎಲ್ಲರಿಗೂ ತಿಳಿಸಲಾಯಿತು.







## ನಮ್ಮ ಯುವ ಚಾಂಪಿಯನ್ಸ್‌ಗಳಿಗೆ ಹೆಮ್ಮೆಯ ಕ್ಷಣ!



ಬೊಸ್ಕೊ ಮನೆ ಮತ್ತು ವಿಕಾಸ್ ಅವರ ಮಕ್ಕಳು ಜನವರಿ ೧೧ರಂದು ಬೆಂಗಳೂರಿನ ಆರ್.ಕೆ. ಹೆಗಡೆ ನಗರದಲ್ಲಿ ಪ್ರಿನ್ಸ್ ಅಕಾಡೆಮಿ ಆಯೋಜಿಸಿದ್ದ ಪ್ರಿನ್ಸ್ ಕಪ್ ೨೦೨೬ –



ಟೈಕೋಂಡೋ ಸ್ಪರ್ಧೆಯಲ್ಲಿ ಭಾಗವಹಿಸಿ :

🥇 ೧೫ ಚಿನ್ನ
🥈 ೦೨ ಬೆಳ್ಳಿ
🥉 ೧೪ ಕಂಚು
ಪದಕಗಳನ್ನು ಗಳಿಸಿದರು.

ಪರಿಶ್ರಮ ಮತ್ತು ಕ್ರೀಡಾ ಮನೋಭಾವದಿಂದ ಮಾಡಿದ ಈ ಅತ್ಯುತ್ತಮ ಸಾಧನೆಗಾಗಿ ಮಕ್ಕಳಿಗೆ ಅಭಿನಂದನೆಗಳು!



## HLK DATA

| | Male | Female | Total |
|---|---|---|---|
| Children rescued | 130 | 18 | 148 |
| Service provided | 68 | 09 | 77 |
| Grand Total | 198 | 27 | 225 |

**New Children Data of Contact Centre/Area:**

| | Fresh | | Repeated | | |
|---|---|---|---|---|---|
| Contact Point | Boys | Girls | Boys | Girls | Total |
| Railway Station DCPU Staff | 15 | 03 | 00 | 00 | 18 |
| Bus Stand BMTC | 30 | 04 | 00 | 00 | 34 |
| Bus Stand KSRTC | 13 | 01 | 00 | 00 | 14 |
| BOSCO Yuvodaya | 02 | 00 | 00 | 00 | 02 |
| BOSCO Yuvakendra | 02 | 00 | 00 | 00 | 02 |
| BOSCO Nivas | 15 | 00 | 01 | 00 | 16 |
| BOSCO Nilaya | 00 | 01 | 00 | 00 | 01 |
| BOSCO Vatsalya Bhavan | 00 | 01 | 00 | 00 | 01 |
| CSN | 14 | 00 | 00 | 00 | 14 |
| ARSP | 37 | 08 | 00 | 00 | 45 |
| Gandhi Nagar | 01 | 00 | 00 | 00 | 01 |
| TOTAL | 129 | 18 | 01 | 00 | 148 |

**Final Action based on Contact date**

| Placement | Boys | Girls | Total |
|---|---|---|---|
| Under Follow-up in BOSCO Centres | 25 | 03 | 28 |
| Home Placement (CWC R) | 56 | 11 | 67 |
| Direct Home Placement | 31 | 01 | 32 |
| Admission to Government Homes | 15 | 02 | 17 |
| Referred to other Institutions | 02 | 01 | 03 |
| Referred to OH | 01 | 00 | 01 |
| TOTAL | 90 | 27 | 117 |

STAY CONNECTED WITH BOSCO

BOSCO
Bangalore Oniyavara Seva Coota

/BOSCOBENGALURU